ದಿನಾಂಕ 09-10-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ದಿನಾಂಕ 15-10-1997 ರಂದು ದಾವಾ ಆಸ್ತಿಯನ್ನು ರೂ.50,000/- ಗಳಿಗೆ ನಾನು, ವಾದಿಯ ಪತಿ ಹಾಗೂ 2 ರಿಂದ 5 ನೇ ವಾದಿಯರ ತಂದೆ, 6 ರಿಂದ 9 ನೇ ವಾದಿಯರ ಅಜ್ಜ, 1 ನೇ ಪ್ರತಿವಾದಿ, 3 ರಿಂದ 6 ನೇ ಪ್ರತಿವಾದಿಯರ ತಂದೆ ಸೇರಿ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಇದುವರೆಗೂ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಇಲ್ಲಿಯವರೆಗೂ ಸಾಮೂಹಿಕ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಸಣ್ಣಮರಡೆಪ್ಪ ರವರ ಆಸ್ತಿ, ಪಶ್ಚಿಮಕ್ಕೆ ರೇವಣಸಿದ್ದಪ್ಪ ಅವರ ಆಸ್ತಿ, ಉತ್ತರಕ್ಕೆ ಚನ್ನಬಸಪ್ಪ ಹುಗ್ಗಿ ಅವರ ಆಸ್ತಿ ಮತ್ತು ದಕ್ಷಿಣಕ್ಕೆ ನಿಂಗಪ್ಪ ಕರಿಸಿದ್ದಪ್ಪ ಅವರ ಆಸ್ತಿ ಇರುತ್ತದೆ ಎಂದರೆ ಸರಿ.

2. ದಾವಾ ಆಸ್ತಿಯನ್ನು ಗುಡ್ಡಪ್ಪ ತಂದೆ ಮಾರ್ತಾಂಡಪ್ಪ ಸಾಲಗೇರಿ ಅವರಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಖರೀದಿ ಮಾಡಿದಾಗಿನಿಂದ ಎಲ್ಲರೂ ಸಾಮೂಹಿಕ ಸ್ವಾಧೀನಾನುಭವದಲ್ಲಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿ ಮಾಡಲು ಹಣವನ್ನು ಎಲ್ಲರೂ ನೀಡಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ 1/3 ಹಿಸ್ಸೇದ ಹಕ್ಕು ಇರುತ್ತದೆ ಎಂದರೆ ಸರಿ.

**2 ರಿಂದ 7 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.                C/c. ಪ್ರಧಾನ  ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.